# ಅಪೂರ್ಣ ಅದ್ಭುತ 'ಅಲಿ ರೋಜಾ'

ಬಾದಶಹಾ, ಸರದಾರರು, ಸಾಧುಸಂತರು ತಮ್ಮ ತಮ್ಮ ಅಭಿರುಚಿಗೆ ತಕ್ಕಂತೆ ನೂರಾರು ಸಮಾಧಿ ಕಟ್ಟಡಗಳನ್ನು ವಿಜಯಪುರದಲ್ಲಿ (ಹಿಂದಿನ ವಿಜಾಪುರ) ನಿರ್ಮಿಸಿದ್ದಾರೆ. ಅವುಗಳಲ್ಲಿ ಗೋಳಗುಮ್ಮಟ, ಇಬ್ರಾಹಿಂ ರೋಜಾ ಮತ್ತು ಬಾರಾ ಕಮಾನ್‌ಗಳು ಪ್ರಸಿದ್ಧ. ಬಾರಾ ಕಮಾನ್ ಕಟ್ಟಡದ ಮೂಲ ಹೆಸರು 'ಅಲಿ ರೋಜಾ'. ದಂತಕಥೆಯೊಂದರ ಪ್ರಕಾರ 2ನೇ ಇಬ್ರಾಹಿಂ ಆದಿಲ್ ಶಹಾನು ಸೂಕ್ಷ್ಮ ಕುಸುರಿ ಕೆತ್ತನೆಯ ಇಬ್ರಾಹಿಂ ರೋಜಾ ನಿರ್ಮಿಸಿದರೆ, ಆತನ ಮಗ ಮೊಹಮ್ಮದ್ ಆದಿಲ್ ಶಹಾ ಬೃಹತ್ ಗೋಳಗುಮ್ಮಟ ಸೃಷ್ಟಿಸಿದನು. ಈತನ ಮಗ ಎರಡನೇ ಅಲಿ ಆದಿಲ್ ಶಹಾನು (ಆಳ್ವಿಕೆ 1656–72) ತನ್ನ ಅಪ್ಪ ಮತ್ತು ತಾತನನ್ನು ಮೀರಿಸುವ ಸಲುವಾಗಿ ವೈಭವೋಪೇತ 'ಅಲಿ ರೋಜಾ' ಕಟ್ಟಿಸಲಾರಂಭಿಸಿದ. ಆದರೆ ದುರದೃಷ್ಟವಶಾತ್ ಅದು ಪೂರ್ತಿಯಾಗಲಿಲ್ಲ. ಅರೆ ಕೆಲಸಕ್ಕೆ ಪರ್ಯಾಯ ಶಬ್ದವಾಗಿ 'ಬಾರಾ ಕಮಾನ್' ಎಂದಾಯಿತು. ಕಟ್ಟಡದ ತಳಪಾಯ ಹಾಗೂ ಮೊದಲಂತಸ್ತಿನ ಕಟ್ಟಡವು ಗೋಳಗುಮ್ಮಟಕ್ಕಿಂತ ದೊಡ್ಡ ಪ್ರಮಾಣದಲ್ಲಿರುವುದನ್ನು ಗಮನಿಸಿದಾಗ, ಅಲಿ ರೋಜಾ ಕಟ್ಟಡ ಪೂರ್ತಿಗೊಂಡಿದ್ದರೆ ಪ್ರಪಂಚದಲ್ಲಿಯೇ ಅದೊಂದು ಅದ್ಭುತ ನಿರ್ಮಿತಿಯಾಗುತ್ತಿತ್ತೆಂದು ಊಹಿಸಬಹುದಾಗಿದೆ.

–ರಮಣ್ ಶೆಟ್ಟಿ ರೆಂಜಾಳ್, ಮುಂಬೈ





# ದೇವರ ಮಣೆ ಬಲ್ಲಿರಾ?

ಉತ್ತರಕನ್ನಡದ ಬಹುತೇಕರ ಮನೆಗಳಲ್ಲಿ ಕಾಣಸಿಗುತ್ತಿದ್ದ ಈ ದೇವರ ಮಣೆಯನ್ನು ಪೂಜೆ ಮಾಡುವಾಗ ಮಾತ್ರ ಉಪಯೋಗಿಸಲಾಗುತ್ತದೆ. ಹೀಗಾಗಿ ಇದು ದೇವರ ಮನೆಗೆ ಮಾತ್ರ ಸೀಮಿತ. ಈ ದೇವರ ಮಣೆಯನ್ನು ಸಾಮಾನ್ಯವಾಗಿ ಹಲಸಿನ ಮರದಿಂದ ಮಾಡಲಾಗುತ್ತದೆ. ಬಹುತೇಕರು ಹಿಡಿಕೆವುಳ್ಳ ವೃತ್ತಾಕಾರದ ಮಣೆಗಳನ್ನು ಮಾಡಿಸಿಕೊಳ್ಳುತ್ತಾರೆ. ಇದನ್ನು ಮರದ ಒಂದೇ ಹಲಗೆಯಿಂದ ಮಾಡಲಾಗಿದ್ದು, ಚಿತ್ರದಲ್ಲಿ ಕಾಣುವಂತೆ ಮಣೆಯ ಮೇಲ್ಭಾಗ ಹಾಗೂ ಕೆಳಭಾಗವನ್ನು ಚೊಕ್ಕವಾಗಿ ವಿನ್ಯಾಸಗೊಳಿಸಲಾಗಿದೆ. ಈ ಮಣೆಯು ಸುಮಾರು ನೂರು ವರ್ಷಗಳ ಹಳೆಯದ್ದು.

–ಪ್ರೊ. ಗೋಪಾಲಕೃಷ್ಣ ಹೆಗಡೆ, ಶಿರಸಿ



# ಗ್ಯಾರೇಜ್‌ನ ಬುಲೆಟ್ ಕುರ್ಚಿ

ಸ್ಕೂಟರ್ ಸರ್ವೀಸ್ ಮಾಡಿಸಲು ಸಾಗರ ತಾಲ್ಲೂಕು ಕೇಂದ್ರದಿಂದ 8 ಕಿ.ಮೀ. ದೂರವಿರುವ ಪುಟ್ಟ ಗ್ರಾಮ ಕಾರ್ಗಡಿಗೆ (ಕಾರಣಗಿರಿ) ಅದನ್ನು ಕೊಂಡೊಯ್ದಿದ್ದೆ. ಗ್ಯಾರೇಜ್ ತಲುಪಿದೊಡನೆ ಶ್ರೀ ಗಜಾನನ ಆಟೊ ವರ್ಕ್ಸ್ (ಗ್ಯಾರೇಜ್) ಮಾಲೀಕ ಮೆಕ್ಯಾನಿಕ್ ಸಂತೋಷ್, 'ಕೂತ್ಕೊಳ್ಳಿ ಸರ್' ಎಂದು ಬುಲೆಟ್ ಕುರ್ಚಿ ತೋರಿದರು. ಕುರ್ಚಿಯನ್ನು ಕಂಡು ಆಶ್ಚರ್ಯಗೊಂಡೆ. ಮಾಮೂಲಿನಂತಿರದ ಅದನ್ನು ಗಮನಿಸಿದಾಗ ಅದೊಂದು ಬೈಕ್‌ಗಳ ಅನುಪಯುಕ್ತ ಭಾಗಗಳಿಂದ ರೂಪಿಸಿದ ಆಸನವಾಗಿದ್ದದ್ದು ಅರಿವಿಗೆ ಬಂತು. ವಿಚಾರಿಸಿದಾಗ, 'ಬುಲೆಟ್ ಬೈಕ್‌ನ ಸ್ಟೀಲ್ ಗಾರ್ಡ್ (ಬಂಪರ್), ಸ್ಯಾರಿಗಾರ್ಡ್, ಹ್ಯಾಂಡಲ್, ಚೈನ್ ಸ್ಪ್ರಾಕೆಟ್‌ಗಳನ್ನು ನನ್ನ 'ಮೆಕ್ಯಾನಿಕ್' ತಲೆ ಓಡಿಸಿ ಕುರ್ಚಿಯನ್ನಾಗಿ ಮಾಡಿದ್ದೇನೆ' ಎಂದರು ಸಂತೋಷ್. ಕುರ್ಚಿಯೊಂದಿಗೆ ಟೀಪಾಯಿ ಇದ್ದರೆ ಚೆಂದ ಎಂದು ಬೈಕ್‌ನ ಚೈನ್ ಸ್ಪ್ರಾಕೆಟ್ ಮತ್ತು ಚೈನ್‌ಗಳನ್ನೇ ಬಳಸಿ ಟೀಪಾಯಿಯನ್ನೂ ಅವರು ತಯಾರಿಸಿದ್ದಾರೆ. ಕೆಲಸದ ನಡುವೆಯೂ ಇವರ ಹೊಸ ಆವಿಷ್ಕಾರಕ್ಕೆ ತಲೆದೂಗಲೇಬೇಕು.

–ನಗರ ಗುರುದೇವ್ ಭಂಡಾರ್ಕರ್, ಹೊಸನಗರ

